

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly  October : 2014  Vol. :1  Issue : 8  5116/ಜಯ ಸಂ  ಅಕ್ಟೋಬರ್ 2014  ಪುಟಗಳು : 8





## ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದಲ್ಲಿ

### ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ವಿಚಾರ ಸಂಕಿರಣ

# 2014ರ ಜನಾದೇಶ ಒಂದು ವಿಶ್ಲೇಷಣೆ

**ದಿನಾಂಕ : 3-9-2014**

| | | | |
|---|---|---|---|
| ಪ್ರತಿನಿಧಿತ ಕಾಲೇಜುಗಳು | : 43 | ಉಪನ್ಯಾಸಕರು+ಶಿಕ್ಷಕರು | : 149 |
| ವಿದ್ಯಾರ್ಥಿಗಳು | : 537 | ಇತರ ಪ್ರತಿನಿಧಿಗಳು | : 41 |

ಎಲ್ಲಾ ಅವಧಿಗಳ ಕೊನೆಗೆ ಮುಕ್ತಸಂವಾದದಲ್ಲಿ ಉತ್ತಮ ಪ್ರತಿಕ್ರಿಯೆಗಳು ವ್ಯಕ್ತವಾದವು.
ಜನಾದೇಶದ ಬಗೆಗೆ ವಿದ್ಯಾರ್ಥಿಗಳು ತಯಾರಿಸಿದ ಪ್ರದರ್ಶಿನಿ ಎಲ್ಲರ ಗಮನಸೆಳೆಯಿತು.

**ಒಟ್ಟು : 727**

### ಪ್ರಸ್ತಾವನೆ :
### ವಿಚಾರಸಂಕಿರಣದ ಉದ್ದೇಶ



**ಡಾ। ಪ್ರಭಾಕರ ಭಟ್**
ಸಂಚಾಲಕರು, ಶ್ರೀರಾಮ ವಿದ್ಯಾಕೇಂದ್ರ

“ಇಂದಿನ ಯುವಸಮುದಾಯಕ್ಕೆ ರಾಷ್ಟ್ರೀಯ ದೃಷ್ಟಿಕೋನವನ್ನೀಯುವ ವಿಚಾರಗಳು ತಲುಪದೆ ಹೋದಲ್ಲಿ ಅವರುಗಳನ್ನು ದೇಶದ ಬಗೆಗೆ ಚಿಂತಿಸುವಂತೆ ಮಾಡುವುದು ಹೇಗೆ ಸಾಧ್ಯ? ಅದಕ್ಕಾಗಿ ರಾಷ್ಟ್ರೀಯತೆಯ ಅಮೃತ ಸ್ಪರ್ಶವನ್ನೀಯುವ ಅನೇಕ ವಿಚಾರಗಳನ್ನಿಟ್ಟುಕೊಂಡು ಕಳೆದ ಐದು ವರ್ಷಗಳಿಂದ ಇಂತಹ ವಿಚಾರ ಸಂಕಿರಣ ಇಲ್ಲಿ ನಡೆಯುತ್ತಿದೆ. ಪ್ರಸ್ತುತ ವಿಷಯ ಇತ್ತೀಚೆಗಷ್ಟೇ ನಿರ್ಣಾಯಕ ಜನಾದೇಶವನ್ನು ನೀಡಿದ ಯುವ ಸಮುದಾಯಕ್ಕೆ ಹೆಚ್ಚು ಆಪ್ಯಾಯಮಾನವಾಗಬಹುದು”

### ಅವಧಿ-1
### ಜನಾದೇಶದ ಹಿನ್ನೆಲೆ



**ಶ್ರೀ ಪ್ರತಾಪಸಿಂಹ**
ಸಂಸದರು, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ, ಅಂಕಣಕಾರ

“ಕುಟುಂಬ ರಾಜಕಾರಣ ವ್ಯಕ್ತಿಕೇಂದ್ರಿತ ರಾಜಕಾರಣ, ಇವೆಲ್ಲವುಗಳಿಂದ ಮೇಲೆದ್ದು ಕೇವಲ ರಾಷ್ಟ್ರೀಯ ಭಾವದಿಂದ ಜನ ಚಿಂತಿಸಲು ತೊಡಗಿದುದು ಈ ಜನಾದೇಶಕ್ಕೆ ಕಾರಣವಾಯಿತು.

ಅದರೊಂದಿಗೆ ಪ್ರಖರ ರಾಷ್ಟ್ರೀಯವಾದಿಯಾಗಿದ್ದ ಮೋದಿ ಇವರು ಪ್ರಧಾನಿ ಅಭ್ಯರ್ಥಿಯಾಗಿ ಘೋಷಣೆಯಾದದ್ದು ಎಲ್ಲವೂ ಸೇರಿ ಸ್ಪಷ್ಟ ಬಹುಮತದ ಸರಕಾರ ಅಸ್ತಿತ್ವಕ್ಕೆ ಬಂತು. ಕಳೆದ 2 ದಶಕಗಳ ಮಿಶ್ರ ಸರಕಾರದ ಆಡಳಿತದಿಂದ ಬೇಸತ್ತಿದ್ದ ಜನ ಮೋದಿಯವರಿಗೆ ಇನ್ನಿಲ್ಲದ ಬೆಂಬಲ ಸೂಚಿಸಿ, ರಾಷ್ಟ್ರೀಯವಾದಕ್ಕೆ ಜಯ ತಂದಿತ್ತರು.

### ಅವಧಿ-2
### ಜನಾದೇಶದ ಮೇಲೆ ಸಾಮಾಜಿಕ ಜಾಲತಾಣಗಳ ಪ್ರಭಾವ



**ಶ್ರೀ ಕಿರಣ್ ಕುಮಾರ್ ಕೆ.ಎಸ್.**
ಸಾಮಾಜಿಕ ಜಾಲತಾಣದ ಸಕ್ರಿಯ ಕಾರ್ಯಕರ್ತರು, ಬೆಂಗಳೂರು

“ಒಂದು ದೇಶದ ಜನಾದೇಶವನ್ನು ನಿರ್ಣಯಿಸುವಲ್ಲಿ ಸಾಮಾಜಿಕ ಜಾಲತಾಣಗಳ ಪ್ರಭಾವ ಅತ್ಯಂತ ಪ್ರಮುಖವಾಗಿದೆ ಎಂಬುದನ್ನು ಈ ಬಾರಿಯ ಚುನಾವಣೆ ತೋರಿಸಿಕೊಟ್ಟಿದೆ. ನರೇಂದ್ರ ಮೋದಿಯವರು ಆಧುನಿಕ ತಂತ್ರಜ್ಞಾನವನ್ನು ಅತ್ಯಂತ ಸಮರ್ಪಕವಾಗಿ ಬಳಸಿಕೊಂಡಿರುವುದನ್ನು ನಾವು ಕಾಣಬಹುದು. ವಿದ್ಯಾರ್ಥಿ ಸಮುದಾಯವು ಜಾಲತಾಣಗಳನ್ನು ಈ ರೀತಿ ಬಳಸಿಕೊಂಡಲ್ಲಿ ಎಂತಹ ಬದಲಾವಣೆಯನ್ನು ಕಾಣಲು ಸಾಧ್ಯ ಎಂಬುದಕ್ಕೆ ಈ ಜನಾದೇಶ ಪ್ರತ್ಯಕ್ಷ ಸಾಕ್ಷಿಯಾಗಿದೆ.

### ಅವಧಿ-3 ಸಮಾರೋಪ
### ಪರಿವರ್ತನೆಯ ರಾಜಕಾರಣದ ಮುಂದಿರುವ ಸವಾಲುಗಳು



**ಶ್ರೀ ವಾದಿರಾಜ್**
ಪ್ರಾಂತ ಪ್ರಚಾರ ವಿಭಾಗ ಪ್ರಮುಖ್ ರಾಷ್ಟ್ರೀಯ ಸ್ವಯಂಸೇವಕ ಸಂಘ

“ರಾಜಕಾರಣದಲ್ಲಿ ನಿರೀಕ್ಷಿತ ಪರಿವರ್ತನೆ ಬಂದಿದೆ. ಅದರೊಂದಿಗೆ ಜವಾಬ್ದಾರಿಯೂ ಹೆಚ್ಚಿದೆ. ಸಣ್ಣಪುಟ್ಟ ಸಂಗತಿಗಳ ಬಗೆಗೆ ಗಂಭೀರವಾಗಿ ಆಲೋಚಿಸಿದರೆ ಮಹತ್ಕಾರ್ಯಗಳು ತನ್ನಿಂತಾನೆ ಸಿದ್ಧಿಸುತ್ತವೆ ಎಂಬುದು ಈ ದೇಶ ಬಹುಹಿಂದೆಯೇ ಕಂಡುಕೊಂಡಿದೆ. ಈಗ ಮತ್ತೊಮ್ಮೆ ಅಂತಹ ಕಾಲ ಸನ್ನಿಹಿತವಾಗಿದೆ. ಬದಲಾವಣೆಗಳು ಆರಂಭವಾಗಬೇಕಾದ್ದು ನಮ್ಮಿಂದಲೇ. ಅದಕ್ಕಾಗಿ ನಮ್ಮ ಚಿಂತನೆ, ಯೋಚನೆ ಹಾಗೂ ಕಾರ್ಯಶೈಲಿಯೂ ಬದಲಾಗಬೇಕಾಗಿದೆ.

ಚಿಂತನರಶ್ಮಿ

# ಶಾಲೆಯಲ್ಲಿ ಶಿವಾಲಯ ಕಂಡ ಮಹಾನುಭಾವ

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಡಂಬಳ ಗ್ರಾಮದ ಈ ವಯೋವೃದ್ಧರ ಹೆಸರು ಹನುಮಂತಪ್ಪ ಭರಮಪ್ಪ ಗಡಗಿ. ವಯಸ್ಸು 77, ಅಸ್ತಮಾ ಪೀಡಿತರು. ಓರ್ವ ಮಗ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಇರುವ ಸಾಮಾನ್ಯ ಸಂಸಾರ ಅವರದು. 17 ಎಕ್ರೆ ಜಮೀನಿನಲ್ಲಿ ಕೃಷಿ ಕಾರ್ಯ ನಡೆಸಿ ಅವರ ಪರಿವಾರದ ಜೀವನ ನಿರ್ವಹಣೆ. ಮಗ ಮಲ್ಲಪ್ಪನಿಗೆ ಊರಿನ ವ್ಯವಸಾಯ ಸಹಕಾರಿ ಸಂಘದಲ್ಲಿ ಪಿಗ್ಮಿ ಸಂಗ್ರಾಹಕ ನೌಕರಿ. ಭಗವಂತ ಅನುಗ್ರಹಿಸಿದುದರಲ್ಲೆ ಉಪ್ಪುಸೊಪ್ಪಿನ ಸಂತೃಪ್ತ ಜೀವನ ನಡೆಸುವ ಮನೆತನ ಅವರದು.

ಇತ್ತೀಚೆಗೆ ಅವರ ಊರಲ್ಲಿ ಒಂದು ಅದ್ದೂರಿ ಸಮಾರಂಭ. ಅದರಲ್ಲಿ ಸಚಿವರು, ಸಂಸದರು, ಶಾಸಕರು ಮತ್ತು ಇನ್ನಿತರ ಜನಪ್ರತಿನಿಧಿಗಳೇ ತುಂಬಿದ್ದ ವೇದಿಕೆಯ ಮೇಲೆ ಮೂಲೆಯಲ್ಲೊಂದು ಕಡೆ ಕುಳಿತಿದ್ದ ಈ ವೃದ್ಧರಿಗೆ ಗದಗಿನ ತೋಂಟದ ಸಿದ್ಧಲಿಂಗ ಸ್ವಾಮೀಜಿಯವರಿಂದ ಸನ್ಮಾನ, ಕಾರಣವೇನು ಗೊತ್ತೇ ? ಊರಿನಲ್ಲಿ ಆರಂಭವಾಗಲಿರುವ ಕಸ್ತೂರ್ಬಾ ಬಾಲಕಿಯರ ವಸತಿ ಶಾಲೆಗಾಗಿ ತನ್ನ ಜಮೀನಿನಲ್ಲಿ ಮೂರುವರೆ ಎಕ್ರೆ ಜಾಗವನ್ನು ದಾನ ಮಾಡಿದ ಮಹಾನುಭಾವರು ಅವರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಯಂತೆ ಬಡ, ಹಿಂದುಳಿದ ವರ್ಗದವರಿಗಾಗಿ ಆರಂಭವಾಗಲಿರುವ ಈ ವಿಧದ ಶಾಲೆಗೆ ಕೇಂದ್ರದಿಂದ ಶೇ.75ರಷ್ಟು ಅನುದಾನ ಸಿಗುತ್ತದೆ. ಇಂತಹ ಶಾಲೆಯೊಂದು ಡಂಬಳ ಗ್ರಾಮಕ್ಕೆ ಮಂಜೂರಾಗಿದ್ದರೂ ಕಟ್ಟಡಕ್ಕಾಗಿ ಜಾಗದ ಸಮಸ್ಯೆ ಎದುರಾದಾಗ ಗದುಗಿನ ತೋಂಟದ ಸಿದ್ಧಲಿಂಗ ಸ್ವಾಮೀಜಿಯವರು ಹನುಮಂತಪ್ಪ ಅವರ ಬಳಿ ಜಾಗದ ಸಲುವಾಗಿ ತಮ್ಮ ಮನದಿಚ್ಛೆ ವ್ಯಕ್ತಪಡಿಸಿದರು. ಸ್ವಾಮೀಜಿಯವರ ಅಪೇಕ್ಷೆ ತಿಳಿದಂತೆಯೇ ಬೇರಾವ ವಿಚಾರವನ್ನು ಮಾಡದೆ ಹನುಮಂತಪ್ಪ ಊರ ಪಕ್ಕದಲ್ಲಿರುವ ತಮ್ಮ ಜಮೀನಿನ ಅಷ್ಟು ಜಾಗವನ್ನು ಸಂತೋಷವಾಗಿ ಶಾಲೆಗೆಂದು ಒಪ್ಪಿಸಿದರು. ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಿ ಬಡವನಯ್ಯ ಎಂಬ ವಚನದಂತೆ ಶಾಲೆಯಲ್ಲಿ ಶಿವಾಲಯದ ಪುಲಕ ಕಾಣುವವರಾದರು. ಗೊತ್ತಿರಲಿ, ಅವರು ದಾನ ನೀಡಿರುವ ಜಮೀನಿನ ಬೆಲೆ ಸುಮಾರು ಎರಡು ಲಕ್ಷ ರೂಪಾಯಿಗಳಾದರೂ ಆಗಬಹುದು.

ನಾನು 1946ನೇ ಇಸವಿ ಒಳಗೆ ಮೂಲ್ಕಿ (ಏಳನೇ ತರಗತಿ) ಪರೀಕ್ಷೆ ಪಾಸಾಗೇನ್ರಿ ಊರಿಗೆ ಒಂದು ಹೊಸಾ ಸಾಲಿ ಮಂಜೂರಾಗೇತಿ. ಅದಕ್ಕೆ ಹತ್ತರಾದಾಗ ಇರುವ ನಿನ್ನ ಜಮೀನು ಬೇಕು ಎಂದು ತೋಂಟದಾರ್ಯ ಮಠದ ಸ್ವಾಮಿಜಿ ಕೇಳಿದರು. ಹಿಂದೆ ಮುಂದೆ ಯೋಚನೆ ಮಾಡಲಿಲ್ಲ, ಕೊಟುಬಿಟ್ಟೆ. ನಮ್ಮ ಪೂರ್ವಿಕರ ಪುಣ್ಯ ನನಗೆ ಈ ಜಮೀನು ದೊರೆತಿತ್ತು. ಇದೀಗ ಅದು ಊರಿನ ಮಕ್ಕಳಿಗೆ ನೆರವಾಗಲಿ ಎಂಬುದೇ ನನ್ನ ಬಯಕೆ ಎನ್ನುತ್ತಾರೆ ಧನ್ಯತಾಭಾವದಿಂದ ಹನುಮಂತಪ್ಪ.

ಜಮೀನು ನೀಡಿದಾಗ ನಿಮ್ಮ ಮಕ್ಕಳು ಬೇಡುವೆನ್ನಲಿಲ್ಲವೇ ಎಂದು ಕೇಳಿದಾಗ ನನ್ನ ಮಕ್ಕಳು ಆ ರೀತಿ ಮಾತನಾಡುವುದಿಲ್ಲ. ನನ್ನ ನಿರ್ಧಾರವೇ ಅಂತಿಮ. ಒಳ್ಳೆ ಕೆಲಸಕ್ಕೆ ಸಹಾಯ ಮಾಡುವಾಗ ನನ್ನ ಮಕ್ಕಳು ಬೇಡ ಎನ್ನುವವರಲ್ಲ ನಾನು ಮಕ್ಕಳಿಗೆ ಅಂತಹ ಬುದ್ಧಿ ಕಲಿಸಿಲ್ಲ. ಇತ್ತೀಚೆಗಷ್ಟೇ ಮೃತಳಾಗಿರುವ ನನ್ನ ಪತ್ನಿ ಅವರಿಗೆ ಅಷ್ಟೇ ಉತ್ತಮ ಸಂಸ್ಕೃತಿಯನ್ನು ಕಲಿಸಿ ಬೆಳೆಸಿದ್ದಾಳೆ, ಎಂದು ಅಭಿಮಾನದಿಂದ ಈ ವೃದ್ಧ ಹೇಳುತ್ತಾರೆ. ಶಾಲೆಗೆ ತನ್ನ ಹಾಗೂ ತನ್ನ ಪತ್ನಿಯ ಹೆಸರಿಡುವುದು ಬೇಡ ಎಮದು ಹನುಮಂತಪ್ಪ ತಿಳಿಸಿದ್ದಾರೆ. (ಅಂದಿನ ಸಮಾರಂಭದ ಆಹ್ವಾನ ಪತ್ರಿಕೆಯಲ್ಲಿ ಅವರ ಹೆಸರನ್ನು ಪ್ರಕಟಿಸುವಂತಹ ಸೌಜನ್ಯವನ್ನೂ ಸಂಬಂಧಪಟ್ಟವರು ತೋರಲಿಲ್ಲ ಎಂಬುದು ಬೇರೆ ಮಾತು)

ಯಾವುದೇ ಸಾಧನೆಯನ್ನೇ ಮಾಡದೆ ಹೆಸರಿಗಾಗಿ ಹಪಹಪಿಸುವ ಗಣ್ಯರು ಈ ವೃದ್ಧರ ನಡೆವಳಿಕೆಯಿಂದಾದರೂ ಪಾಠ ಕಲಿಯುವರೇ ?

# ಜಿಲ್ಲಾ ಮಟ್ಟದ ಜ್ಞಾನ-ವಿಜ್ಞಾನ ಮೇಳ



ಉತ್ತಮ ಸಂಸ್ಕಾರದ ತಳಹದಿಯ ಮೇಲೆ ವಿಜ್ಞಾನವನ್ನು ಬೆಳೆಸಬೇಕು. ವಿಜ್ಞಾನದ ಕೊಡುಗೆಯಿಂದ ರಾಷ್ಟ್ರದ ಅಭಿವೃದ್ಧಿಯಾಗಬೇಕು. ಪ್ರತಿಯೊಂದು ಮಗುವಿನಲ್ಲೂ ವೈಜ್ಞಾನಿಕವಾದ ಕುತೂಹಲ ಪ್ರವೃತ್ತಿ ಇರುತ್ತದೆ. ಮಕ್ಕಳ ಸಂಶೋಧನೆಗೆ ಪೂರಕವಾದ ಮಾರ್ಗದರ್ಶನ ಶಿಕ್ಷಕರಿಂದ ಸಿಗಬೇಕು ಎಂದು ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ಡಾ॥ಪ್ರಭಾಕರ ಭಟ್ ಹೇಳಿದರು.

ಅವರು ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದಲ್ಲಿ ವಿದ್ಯಾಭಾರತಿ ಕರ್ನಾಟಕದ ವತಿಯಿಂದ ದಕ್ಷಿಣಕನ್ನಡ ಜಿಲ್ಲಾ ಮಟ್ಟದ ಜ್ಞಾನ-ವಿಜ್ಞಾನ ಮೇಳದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನ್ಯಾಯಾವಾದಿ ಸುರೇಶ್‌ಕುಮಾರ ಬಿ. ನಾವೂರು ಮೇಳವನ್ನು ಉದ್ಘಾಟಿಸಿ ಮಾತನಾಡಿದರು. ವಿಜ್ಞಾನದೊಂದಿಗೆ ಹಿರಿಯರು ನೀಡಿದ ಸಂಸ್ಕಾರ, ಮೌಲ್ಯಗಳನ್ನು ರೂಢಿಸಿಕೊಂಡಾಗ ಬೌದ್ಧಿಕ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ನಮ್ಮ ಹಿರಿಯರ ನಂಬಿಕೆಗಳಲ್ಲಿ ವೈಜ್ಞಾನಿಕ ಕಾರಣಗಳಿದ್ದು ಅದನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು ಎಂದರು. ಮುಖ್ಯ ಅತಿಥಿಯಾಗಿ ವೆಂಕಟಗಿರೀಶ ಕೆಲಿಂಜ ಮಾತನಾಡಿ ವಿದ್ಯಾರ್ಥಿ ಸ್ವತಂತ್ರವಾಗಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ವಿದ್ಯಾಭಾರತಿ ಜಿಲ್ಲಾ ಕಾರ್ಯದರ್ಶಿ ಲೋಕಯ್ಯ ಡಿ. ಪ್ರಸ್ತಾವನೆಗೈದರು. ಉಪಾಧ್ಯಕ್ಷ ವೆಂಕಟರಮಣ ಕಡಬ, ಸಹಕಾರ್ಯದರ್ಶಿ ರವಿರಾಜ, ಪ್ರಾಚಾರ್ಯ ಕೃಷ್ಣಪ್ರಸಾದ ಉಪಸ್ಥಿತರಿದ್ದರು.

ಉಪಪ್ರಾಚಾರ್ಯ ವಸಂತ ಬಲ್ಲಾಳ್ ಸ್ವಾಗತಿಸಿ, ಗಾಯತ್ರಿ ಮಾತಾಜಿ ವಂದಿಸಿದರು. ಉಪನ್ಯಾಸಕಿ ರಶ್ಮಿ ನಿರೂಪಿಸಿದರು. ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿ ವಿಜ್ಞಾನದ ಮಾದರಿಗಳು ಹಾಗೂ ಪ್ರಯೋಗಗಳನ್ನು ಪ್ರದರ್ಶಿಸಿ, ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದರು.


| | | |
|---|---|---|
| ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು | : | ನಾರಾಯಣ ಸೋಮಯಾಜಿ, ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ |
| ಕಾರ್ಯನಿರ್ವಾಹಕ ಸಂಪಾದಕರು | : | ಮಹೇಶ ನೆಟ್ಲ |
| ಸಹಸಂಪಾದಕರು | : | ದಿವ್ಯಾಕುಮಾರಿ, ಕಾವ್ಯ, ಜ್ಯೋತಿ, ಚಂದ್ರಿಕಾ, ಶ್ರೀಮತಿ ವಿನುತ ಎಸ್.ಎನ್. |
| ವ್ಯವಸ್ಥಾಪಕ ಸಂಪಾದಕರು | : | ಸತೀಶ ಭಟ್, ಶಿವಗಿರಿ |
| ವಿನ್ಯಾಸ | : | ಕುಶಾಲಪ್ಪ ಅಮ್ಟೂರು |

## ಶಿಶುಮಂದಿರ

### ಸಮಗ್ರ ಶಿಶುಶಿಕ್ಷಣ ಚಿಂತನ ಬೈಠಕ್ : 18.09.2014

ಶ್ರೀರಾಮ ಶಿಶುಮಂದಿರದ ವತಿಯಿಂದ ಸಮಗ್ರ ಶಿಶುಶಿಕ್ಷಣ ಆಶ್ರಯದಲ್ಲಿ ನಡೆಯುವಂತಹ ಶಿಶುಮಂದಿರಗಳ ಬೈಠಕ್ ಶ್ರೀರಾಮ ವಿದ್ಯಾ-ಕೇಂದ್ರದ ಪತಂಜಲಿ ಯೋಗಭವನದಲ್ಲಿ ನಡೆಯಿತು. ಪುತ್ತೂರು, ಮಂಗಳೂರು, ಉಡುಪಿ ಜಿಲ್ಲೆಗಳಲ್ಲಿ ನಡೆಯುವಂತಹ ಶಿಶುಮಂದಿರಗಳ ಆಡಳಿತ ಮಂಡಳಿ ಸದಸ್ಯರು ಮತ್ತು ಮಾತಾಜಿಗಳು ಈ ಬೈಠಕ್‌ನಲ್ಲಿ ಉಪಸ್ಥಿತರಿದ್ದರು.

ಶಿಶು ಶಿಕ್ಷಣದ ಇತಿಹಾಸ, ಡಾ। ಉಪೇಂದ್ರ ಶೆಣೈಯವರ ಶಿಕ್ಷಣದ ಚಿಂತನೆ, ಉದ್ದೇಶ ಈ ರೀತಿಯ ವಿಷಯಗಳ ಬಗ್ಗೆ ಮೈತ್ರೇಯಿ ಗುರುಕುಲದ ಮಾತೃಶ್ರೀ ಭ। ಸಾವಿತ್ರಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶ್ರೀಯುತ ಡಾ। ಪ್ರಭಾಕರ ಭಟ್, ಇವರು ಶಿಶುಮಂದಿರದಲ್ಲಿ ಕೊಡುವ ಶಿಕ್ಷಣಕ್ಕೆ ನಾವೆಲ್ಲರೂ ಬದ್ಧರಾಗಿರಬೇಕು. ಅದರಲ್ಲಿ ಯಾವುದೇ ರೀತಿಯ ರಾಜಿಯನ್ನು ಮಾಡಿಕೊಳ್ಳಬಾರದು. ಮಗು ಹಂತಹಂತವಾಗಿ ವಿಕಾಸವಾಗಲು ನಮ್ಮ ಸಹಕಾರ ಇರಬೇಕು ಎನ್ನುವಂತಹ ಅನೇಕ ವಿಚಾರಗಳನ್ನು ಮನಮುಟ್ಟುವಂತೆ ತಿಳಿಸಿದರು.

ಹಿಂದು ಸೇವಾ ಪ್ರತಿಷ್ಠಾನದ ನಿರ್ದೇಶಕರಾದಂತಹ ಶ್ರೀ ಸುರೇಶ್ ಬಿ. ಇವರು ಸೇವಾ ಶಿಕ್ಷಣ ವರ್ಗ, ಸೇವಾವ್ರತಿಗಳ ಹೊರಡಿಸುವಿಕೆ, ಬಾಲಗೋಕುಲ ಪ್ರಶಿಕ್ಷಣ ವರ್ಗ ಈ ವಿಷಯಗಳ ಬಗ್ಗೆ ತಿಳಿಸಿದರು.ಒಟ್ಟು 104 ಮಂದಿ ಈ ಬೈಠಕ್‌ನಲ್ಲಿ ಭಾಗವಹಿಸಿದ್ದರು. ಶಿಶು ಶಿಕ್ಷಣ ಸಂಶೋಧನಾ ವಿಭಾಗದ ಸಂಯೋಜಕಿಯಾದ ಭ। ಛಾಯಾ ಇವರು ಉಪಸ್ಥಿತರಿದ್ದರು. ಭ। ಗಂಗಾ ಮಾತಾಜಿ ಸ್ವಾಗತಿಸಿ ಶ್ರೀಮತಿ ಸುಧಾ ಭಟ್ ಕಾರ್ಯಕ್ರಮ ನಿರೂಪಿಸಿದರು.

### ಹೊರಸಂಚಾರ-ಶ್ರೀರಾಮ ಶಿಶುಮಂದಿರ ಕಲ್ಲಡ್ಕ :

ಶ್ರೀರಾಮ ಶಿಶುಮಂದಿರದ ಮಕ್ಕಳ ಹೊರಸಂಚಾರವನ್ನು ಪೊಳಲಿ ರಾಜರಾಜೇಶ್ವರಿ ದೇವಸ್ಥಾನಕ್ಕೆ ಆಯೋಜಿಸಲಾಯಿತು. ದೇವರ ದರ್ಶನ ಮಾಡಿ ಭೋಜನ ಪ್ರಸಾದವನ್ನು ಸ್ವೀಕರಿಸಿ ಅಲ್ಲಿಂದ ದೇವಸ್ಥಾನದ ಸನಿಹದಲ್ಲಿರುವ ರಾಮಕೃಷ್ಣ ತಪೋವನವನ್ನು ವೀಕ್ಷಿಸಿ ಅಲ್ಲಿರುವ ಧ್ಯಾನಮಂದಿರದಲ್ಲಿ ಮಕ್ಕಳು ಹಾಡು ಶ್ಲೋಕ ಭಜನೆಯನ್ನು ಹೇಳಿದರು. ಒಟ್ಟು 101 ಮಕ್ಕಳು 2 ಆಡಳಿತ ಮಂಡಳಿ ಸದಸ್ಯರು 8 ಮಂದಿ ಮಾತಾಜಿಗಳು ಹೊರಸಂಚಾರದಲ್ಲಿ ಭಾಗವಹಿಸಿದ್ದರು.

### ಅಕ್ಕಮಹಾದೇವಿ ಶಿಶುಮಂದಿರ :

ಶ್ರೀ ಅಕ್ಕಮಹಾದೇವಿ ಶಿಶುಮಂದಿರದ ಮಕ್ಕಳು ಬೆಳಗ್ಗೆ 9.30ಕ್ಕೆ ಶಿಶುಮಂದಿರದಿಂದ ಹೊರಟು ವಿಟ್ಲ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ದೇವರ ದರ್ಶನ ಪಡೆದು ಶ್ರೀಕ್ಷೇತ್ರ ಒಡಿಯೂರಿನಲ್ಲಿ ಸ್ವಾಮೀಜಿಗಳ ಆಶೀರ್ವಾದ ಪಡೆದರು. ಭೋಜನ ಸ್ವೀಕರಿಸಿ ಶ್ರೀರಾಮ ವಿದ್ಯಾಕೇಂದ್ರಕ್ಕೆ ಭೇಟಿ ನೀಡಿ ಸುಮಾರು ಅರ್ಧ ತಾಸು ಪರಿಸರವನ್ನು ವೀಕ್ಷಿಸಿದರು. ಒಟ್ಟು 14 ಮಕ್ಕಳು ಹಾಗೂ ಶ್ರೀ ಸರಸ್ವತಿ ಶಿಶುಮಂದಿರದ ಶೋಭಾ ಮಾತಾಜಿ ಶ್ರೀರಾಮ ಶಿಶುಮಂದಿರದ ಚಿತ್ರ ಮಾತಾಜಿ ಹೊರ ಸಂಚಾರ ಜತೆಗಿದ್ದರು.

## ಪ್ರಾಥಮಿಕ

### ಪೋಷಕರ ಸಮಾವೇಶ : 04.09.2014




ಒಂದು ಶಾಲೆಯ ಏಳಿಗೆಯಲ್ಲಿ ಪೋಷಕರ ಸಲಹೆ ಅಭಿಪ್ರಾಯ ಅತಿ ಮುಖ್ಯ ಈ ಹಿನ್ನಲೆಯಲ್ಲಿ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೋಷಕರ ಸಭೆಯನ್ನು ಕರೆಯಲಾಗಿತ್ತು.

ಸಭೆಗೂ ಮುನ್ನ ಪೋಷಕರು ವಿವಿಧ ತಂಡಗಳಲ್ಲಿ ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರ ಜೊತೆ ಮುಕ್ತ ಸಂವಾದ ನಡೆಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ತದನಂತರ ವೇದವ್ಯಾಸ ಮಂಟಪದಲ್ಲಿ ಎಲ್ಲಾ ಪಾಲಕರು ಸಂಪದಗೊಂಡು ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಡಾ.ಪ್ರಭಾಕರ್ ಭಟ್ ಕಲ್ಲಡ್ಕ ಮತ್ತು ಅಧ್ಯಕ್ಷರಾದ ನಾರಾಯಣ ಸೋಮಯಾಜಿ ಜೊತೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು ಸಂಚಾಲಕರು ಪಾಲಕರ ಅನಿಸಿಕೆಗಳಿಗೆ ಸ್ಪಂದಿಸಿದರು. ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು ಹಾಗೂ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶಿವಗಿರಿ ಸತೀಶ್ ಭಟ್ ಉಪಸ್ಥಿತರಿದ್ದರು. ಶಿವಗಿರಿ ಸತೀಶ್ ಭಟ್ ಸ್ವಾಗತಿಸಿ, ಪ್ರೇಮ ಮಾತಾಜಿ ವಂದಿಸಿ ಸಂತೋಷ್ ಶ್ರೀಮಾನ್ ನಿರೂಪಿಸಿದರು.

### ಪ್ರತಿಭಾ ಪುರಸ್ಕಾರ 20.09.2014

ಪ್ರತಿಭಾ ಕಾರಂಜಿ , ವಿಜ್ಞಾನ ಮೇಳ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಹಿನ್ನಲೆಯಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯ ಲಕ್ಷ್ಮಣ ಬಾಯಿಲ, ಉದ್ಯಮಿ ಹಾಗೂ ಸರ್ವಶ್ರೇಷ್ಠ ಫ್ರೆಂಡ್ಸ್ ಕಲ್ಲಡ್ಕ ಇದರ ಅಧ್ಯಕ್ಷರಾದ ಶ್ರೀಯುತ ಪುಷ್ಪರಾಜ್ , ಶಾಲಾಭಿವೃದ್ಧಿ ಸಮಿತಿಯ ಸದಸ್ಯರು ಗೆಳೆಯರ ಬಳಗದ ಅಧ್ಯಕ್ಷರು ತಮ್ಮ ಕ್ರೀಡಾ ಸಾಧನೆಗೆ ರಾಷ್ಟ್ರೀಯ ಪದಕ ಪಡೆದ ಈ ಸಂಸ್ಥೆಯ ಹಿರಿಯ ವಿದ್ಯಾರ್ಥಿಯಾದ ಆನಂದ ಶೆಟ್ಟಿ ಉಪಸ್ಥಿತರಿದ್ದರು.



ಸರಸ್ವತಿ ವಂದನೆಯ ಮೂಲಕ ಕಾರ್ಯಕ್ರಮ ಪ್ರಾರಂಭವಾಗಿ ತದನಂತರ ವಿವಿಧ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಅತಿಥಿಗಳು ಬಹುಮಾನ ವಿತರಿಸಿದರು. ಆನಂದ ಶೆಟ್ಟಿ ಇವರು ಉತ್ತಮ ಕಬಡ್ಡಿ ಆಟಗಾರನಾದ ಪಯಾ ಇವನಿಗೆ ಪ್ರೋತ್ಸಾಹ ಧನ ನೀಡಿ ಪ್ರೋತ್ಸಾಹಿದರು. ವೇದಿಕೆಯಲ್ಲಿ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

ಪ್ರಶೀತಾ ಮಾತಾಜಿ ಸ್ವಾಗತಿಸಿ, ಪುನೀತಾ ಮಾತಾಜಿ ವಂದಿಸಿ, ರೇಖಾ ಮಾತಾಜಿ ನಿರೂಪಿಸಿದರು.

### ಜಿಲ್ಲಾ ಮಟ್ಟದ ಕಬಡ್ಡಿ : ಪ್ರಥಮ

ದಿನಾಂಕ 11.09.2014 ರಂದು ಸರಕಾರಿ ಪದವಿ ಪೂರ್ವ ಕಾಲೇಜು ಸವಣೂರು ಇಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆದ ಜಿಲ್ಲಾ ಮಟ್ಟದ ಪ್ರಾಥಮಿಕ ಬಾಲಕರ ಕಬಡ್ಡಿ ಪಂದ್ಯಾಟದಲ್ಲಿ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ತಂಡವು ಪ್ರಥಮ ಸ್ಥಾನ ಗಳಿಸಿ ಚಿಕ್ಕಮಂಗಳೂರಿನಲ್ಲಿ ನಡೆಯುವ ವಿಭಾಗ ಮಟ್ಟದ ಕಬಡ್ಡಿ ಪಂದ್ಯಾಟಕ್ಕೆ ಆಯ್ಕೆಯಾಗಿದೆ. ಇವರಿಗೆ ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರು, ಸಂಚಾಲಕರು, ಸರ್ವ ಸದಸ್ಯರು, ಅಧ್ಯಾಪಕ ಬಂಧುಗಳು ಅಭಿನಂದನೆಯನ್ನು ಸಲ್ಲಿಸಿದ್ದಾರೆ.



### ಜಿಲ್ಲಾ ಮಟ್ಟದ ಜ್ಞಾನ ವಿಜ್ಞಾನ ಮೇಳ

ದಿನಾಂಕ 11.09.2014 ರಂದು ಶ್ರೀರಾಮ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಜಿಲ್ಲಾ

ಮಟ್ಟದ ಜ್ಞಾನ ವಿಜ್ಞಾನ ಮೇಳದಲ್ಲಿ ಭಾಗವಹಿಸಿದ ಮೇದಿನಿ.ಎಸ್, ರಶ್ಮಿ, ಯತಿಕಾ. ಎಂ, 7ನೇ ತರಗತಿ ಇವರುಗಳು ಸಂಸ್ಕೃತಿ ಜ್ಞಾನ ರಸಪ್ರಶ್ನೆ ಹಾಗೂ ಹರ್ಷಿತಾ.ಎಸ್ 7ನೇ ವಿಜ್ಞಾನ ಮಾದರಿ ಪ್ರದರ್ಶನದಲ್ಲಿ ಪ್ರಥಮ ಸ್ಥಾನವನ್ನು ಪಡೆದು ಪ್ರಾಂತ ಮಟ್ಟದ ಜ್ಞಾನ– ವಿಜ್ಞಾನ ಮೇಳಕ್ಕೆ ಆಯ್ಕೆಯಾಗಿರುತ್ತಾರೆ.

## ಪ್ರತಿಭಾ ಕಾರಂಜಿ : ಜಿಲ್ಲಾ ಮಟ್ಟಕ್ಕೆ ಆಯ್ಕೆ






ವಿಠಲ ಪದವಿಪೂರ್ವ ಕಾಲೇಜಿನಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಶ್ರೀರಾಮ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಾದ ನಿಶಾಂತ್ ಕೃಷ್ಣ 4ನೇ ತರಗತಿ ಧಾರ್ಮಿಕ ಪಠಣ ಸಂಸ್ಕೃತ , ಹರ್ಷಿತಾ.ಎಸ್ 7ನೇ ತರಗತಿ ಸಂಸ್ಕೃತ ಕಂಠಪಾಠ, ಮೇದಿನಿ 7ನೇ ತರಗತಿ ಕನ್ನಡ ಕಂಠಪಾಠ, ಸುಧಾಂಶು ವೈಯಕ್ತಿಕ ಯಕ್ಷಗಾನ ದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಗೆ ಆಯ್ಕೆಯಾಗಿರುತ್ತಾರೆ.

# ಪ್ರೌಢ

### ಮಂಗಳಯಾನ ವೀಕ್ಷಣೆ :

ಮಂಗಳಯಾನ ದೃಶ್ಯದ ವೀಡಿಯೋ ಕ್ಲಿಪ್ಸ್‌ನ್ನು ಟಿ.ವಿಯ ಮೂಲಕ ಶ್ರೀರಾಮ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ




ವೀಕ್ಷಿಸಲು ಅವಕಾಶ ಮಾಡಲಾಯಿತು. ಈ ದೃಶ್ಯವನ್ನು ಕಂಡು ವಿದ್ಯಾರ್ಥಿಗಳು ನೋಡಿ ತುಂಬಾ ಸಂತೋಷ ಪಟ್ಟರು.

### ಶಿಕ್ಷಕರ ದಿನಾಚರಣೆ : 5–9–14

ಶಿಕ್ಷಕರ ದಿನಾಚರಣೆಯಂದು ಪ್ರಧಾನ ಮಂತ್ರಿಯೊಂದಿಗೆ ವಿದ್ಯಾರ್ಥಿಗಳ ಸಂವಾದ



ಕಾರ್ಯಕ್ರಮವನ್ನು ಶ್ರೀರಾಮ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಯ 1800 ವಿದ್ಯಾರ್ಥಿಗಳು ಮಧುಕರ ಸಭಾಂಗಣದಲ್ಲಿ ಎರಡು ದೊಡ್ಡ ಎಲ್.ಇ.ಡಿ ಟಿ.ವಿ.ಯ ಮೂಲಕ ವೀಕ್ಷಿಸಿದರು.

ಈ ಸಂದರ್ಭದಲ್ಲಿ ಶಾಲಾ ಸಂಸ್ಥೆಯ ವತಿಯಿಂದ ಏರ್ಪಡಿಸಲಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ರಘುವೀರ್ ಡಾ। ರಾಧಾಕೃಷ್ಣನ್ ಮತ್ತು ಶಿಕ್ಷಕರ ದಿನಾಚರಣೆಯ ಬಗ್ಗೆ ಮಾತನಾಡಿದರು. ವಿದ್ಯಾರ್ಥಿಗಳು ಶಿಕ್ಷಕರಿಗೆ ಹೂಗುಚ್ಛ ನೀಡಿ ಆಶೀರ್ವಾದ ಪಡೆದು ಸಿಹಿ ಹಂಚಿದರು. ಕಾರ್ಯಕ್ರಮದಲ್ಲಿ ಡಾ। ಕಮಲಾ ಪ್ರಭಾಕರ ಭಟ್, ಮುಖ್ಯೋಪಾಧ್ಯಾಯ ವಸಂತ ಮಾಧವ, ಹಾಗೂ ಶಿಕ್ಷಕ, ಶಿಕ್ಷಕೇತರ ಬಂಧುಗಳು ಭಾಗವಹಿಸಿದ್ದರು.

### ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿಗಳ ಪೋಷಕರ ಸಮಾವೇಶ :

ಆಸಕ್ತಿಯಿದ್ದರೆ ಯಾವುದೇ ಮಾಧ್ಯಮದಲ್ಲಿ ವಿದ್ಯಾರ್ಥಿಗಳು ಕಲಿತರೂ ಬುದ್ಧಿವಂತರಾಗುತ್ತಾರೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗುವುದಿಲ್ಲ. ಮಕ್ಕಳ ಕಲಿಕೆಯೊಂದಿಗೆ ಉತ್ತಮ ನಡವಳಿಕೆ ಹಾಗೂ ಮಾನವೀಯತೆಯ ದೃಷ್ಟಿಯನ್ನು ಬೆಳೆಸಬೇಕು ಎಂದು ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ಡಾ। ಪ್ರಭಾಕರ ಭಟ್ ಹೇಳಿದರು.



ಅವರು ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿಗಳ ಪಾಲಕರ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಪಾಲಕರ ಪರವಾಗಿ ಮಾಧವ ಬ್ರಹ್ಮರಕೂಟ್ಲು, ನಾರಾಯಣ ಭಟ್ ಉಪ್ಪಿನಂಗಡಿ, ಕೃಷ್ಣ ಭಟ್ ಗಿಳ್ಕಿಂಜ, ಫಣಿಫ ಪೆರಾಜೆ, ಕೊರಗಪ್ಪ ಗೌಡ ಅನಂತಾಡಿ ಮಾತನಾಡಿದರು.

ವೇದಿಕೆಯಲ್ಲಿ ವಿದ್ಯಾಕೇಂದ್ರ ಅಧ್ಯಕ್ಷ ಬಿ.ನಾರಾಯಣ ಸೋಮಯಾಜಿ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ವಿಶ್ವನಾಥ ಪ್ರಭು ಕೇಶವ ನಗರ, ಮುತ್ತಪ್ಪ ಮೂಲ್ಯ ತುಳಸಿವನ, ಮುಖ್ಯೋಪಾಧ್ಯಾಯ ವಸಂತ ಮಾಧವ ಉಪಸ್ಥಿತರಿದ್ದರು.

ಶಿಕ್ಷಕರಾದ ಜಿನ್ನಪ್ಪ ಏಳ್ತಿಮಾರ್ ಸ್ವಾಗತಿಸಿ, ರಮೇಶ್ ಎನ್, ಗೋಪಾಲ ಎಂ, ವಿನೋದ್ ಶೆಟ್ಟಿ ಪ್ರಗತಿ ವರದಿ ನೀಡಿದರು. ಜಯಾನಂದ ಪೆರಾಜೆ ವಂದಿಸಿದರು. ಪ್ರೌಢಶಾಲೆಯ 700ಕ್ಕೂ ಹೆಚ್ಚು ಪಾಲಕರು ಭಾಗವಹಿಸಿ ಮಕ್ಕಳ ಪ್ರಗತಿ ಪರಿಶೀಲನೆ ಮಾಡಿದರು.

### ವಲಯ ಮಟ್ಟದ ಕ್ರೀಡಾಕೂಟ : 30.9.2014

ಕಲ್ಲಡ್ಕ ವಲಯಮಟ್ಟದ ಕ್ರೀಡಾಕೂಟವನ್ನು ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ಡಾ॥ ಪ್ರಭಾಕರ ಭಟ್ ಉದ್ಘಾಟಿಸಿ, ಶಿಕ್ಷಕರು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಗುರುಗಳಾಗಿ ಸಮಾಜಕ್ಕೂ ಮಾರ್ಗದರ್ಶಕರಾಗಬೇಕು. ಶಿಕ್ಷಣ ಕೊಠಡಿಯೊಳಗೆ ಸೀಮಿತವಾಗದೆ ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಶಿಕ್ಷಕರ ಜವಾಬ್ದಾರಿಯಾಗಿದೆ. ವಿದ್ಯಾರ್ಥಿಗಳಿಗೆ ನಿರಂತರ ಪ್ರೋತ್ಸಾಹ ಹಾಗೂ ತರಬೇತಿಯಿಂದ ಆತ್ಮವಿಶ್ವಾಸ ಬೆಳೆಸಬೇಕೆಂದರು.

ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಗುರುನಾಥ ಬಾಗೇವಾಡಿ ಮುಖ್ಯ ಅತಿಥಿಯಾಗಿ ಕ್ರೀಡಾಕೂಟಕ್ಕೆ ಶುಭಹಾರೈಸಿದರು.

ಕ್ರೀಡಾಕೂಟ ಸಮಿತಿ ಗೌರವಾಧ್ಯಕ್ಷ ವಸಂತಮಾಧವ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷ ಗಂಗಾಧರ ರೈ ಮಾಣಿ, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ರಾಧಾಕೃಷ್ಣ ಅಡ್ಯಂತಾಯ, ಕ.ಸಾ.ಪ. ಅಧ್ಯಕ್ಷ ಜಯಾನಂದ ಪೆರಾಜೆ, ಶಿಕ್ಷಣ ಸಂಯೋಜಕರಾದ ಉದಯಕುಮಾರ್, ಕೋಶಾಧಿಕಾರಿ ಜಗದೀಶ ಕಲ್ಲಡ್ಕ, ಅಂತರಾಷ್ಟ್ರೀಯ ಕ್ರೀಡಾಪಟು ಶಂಕರ್ ಉಪಸ್ಥಿತರಿದ್ದರು. ರಾಷ್ಟ್ರಶಿಕ್ಷಕ ಪ್ರಶಸ್ತಿ ಪುರಸ್ಕೃತ ರಮೇಶ ನಾಯಕ್ ರಾಯಿ ಇವರನ್ನು ಇದೇ



ಸಂದರ್ಭದಲ್ಲಿ ಅಭಿನಂದಿಸಿ ಗೌರವಿಸಲಾಯಿತು. ಗೋಳ್ತಮಜಲು ಪ್ರೌಢಶಾಲಾ ಮುಖ್ಯಗುರು ಜಯಕುಮಾರ್ ಸ್ವಾಗತಿಸಿ, ಸಂಪನ್ಮೂಲ ವ್ಯಕ್ತಿ ನಾಗರಾಜ ವಂದಿಸಿದರು. ಕೃಷ್ಣಪ್ರಸಾದ ಕಡೇಶಿವಾಲಯ ನಿರೂಪಿಸಿದರು.

## ಶೈಕ್ಷಣಿಕ ಪ್ರವಾಸ : 7.09.2014



9ನೇ ತರಗತಿಯ ಶೈಕ್ಷಣಿಕ ಪ್ರವಾಸದಲ್ಲಿ ಮೂಡಬಿದ್ರೆ ಸಾವಿರ ಕಂಬ ಬಸದಿ, ಬೆಳುವಾಯಿ ಪತಂಗ ಪಾರ್ಕ್, ಕೊಡ್ಯಡ್ಕ ಅನ್ನಪೂರ್ಣೇಶ್ವರಿ ದೇವಸ್ಥಾನ, ಪಿಲಿಕುಳ, ಕೆ.ಎಂ.ಎಫ್ ಹಾಲು ಉತ್ಪನ್ನ ಘಟಕ, ಪಣಂಬೂರು ಬೀಚ್ ಮುಂತಾದ ಕಡೆಗಳಿಗೆ ಭೇಟಿ ನೀಡಲಾಯಿತು. ಪ್ರವಾಸದಲ್ಲಿ 80 ವಿದ್ಯಾರ್ಥಿಗಳು ಹಾಗೂ 6ಅಧ್ಯಾಪಕರು ಉಪಸ್ಥಿತರಿದ್ದರು.

## ಉಜ್ಜೈನಿಯಲ್ಲಿ ಮಲ್ಲಕಂಬ ಅಭ್ಯಾಸವರ್ಗ : 15.08.2014

ಶ್ರೀರಾಮ ಪ್ರೌಢಶಾಲೆಯಿಂದ ಶ್ರೀ ಕೊಟ್ರೇಶಪ್ಪ ಶ್ರೀಮಾನ್ ಹಾಗೂ ಹತ್ತನೇ ತರಗತಿ ವಿದ್ಯಾರ್ಥಿಗಳಾದ ಪವನ್ 10 ಆಜಾದ್, ಚೇತನ್ ಪಿ. 10ಆಜಾದ್, ಉತ್ತರ ಪ್ರದೇಶದ ಉಜ್ಜೈನಿಯ ಲೋಕಮಾನ್ಯ ತಿಲಕ್ ಸಾಂಸ್ಕೃತಿಕನ್ಯಾಸ್ ವಿದ್ಯಾ-ಕೇಂದ್ರ ಉಜ್ಜೈನಿ ಇಲ್ಲಿ 8 ದಿನಗಳ ಕಾಲ ಜರುಗಿದ ಮಲ್ಲಕಂಬ ಅಭ್ಯಾಸ ವರ್ಗದಲ್ಲಿ ಭಾಗವಹಿಸಿದರು. ಶಾರೀರಿಕ ಅಭ್ಯಾಸ ಮತ್ತು ಮಲ್ಲಕಂಬ ಪ್ರದರ್ಶನದಲ್ಲಿ ಭಾಗವಹಿಸಿ ಪರಿಣಿತಿ ಪಡೆದಿರುತ್ತಾರೆ.

## ದೈಹಿಕ ಶಿಕ್ಷಣ ಶಿಕ್ಷಕರ ಕಾರ್ಯಾಗಾರ :

ತಾಲೂಕು ಮಟ್ಟದ ದೈಹಿಕ ಶಿಕ್ಷಣ ಶಿಕ್ಷಕರ ಒಂದು ದಿನದ ಕಾರ್ಯಾಗಾರವು ಮಧುಕರ ಸಭಾಂಗಣದಲ್ಲಿ ನಡೆಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಶೇಷಶಯನ ಹಾಗೂ ತಾಲೂಕು ದೈ.ಶಿಕ್ಷಣಾಧಿಕಾರಿ ಭಾಗೇವಾಡಿ ಇವರು ಮಾರ್ಗದರ್ಶನ ನೀಡಿದರು. ಕಾರ್ಯಗಾರದಲ್ಲಿ ತಾಲೂಕು ದೈ.ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷರು, ಇತರ ಪದಾಧಿಕಾರಿಗಳು ಹಾಗೂ ವಿವಿಧ ಶಾಲೆಗಳ ದೈಹಿಕ ಶಿಕ್ಷಕರು ಉಪಸ್ಥಿತರಿದ್ದರು.

## ಪ್ರತಿಭಾ ಕಾರಂಜಿ: 10.09.2014

ದಿನಾಂಕ 10.09.2014ರಂದು ವಿಠಲ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಶ್ರೀರಾಮ ಪ್ರೌಢಶಾಲೆಯ 10ನೇ ವಿಶ್ವೇಶ್ವರಯ್ಯದ ಜಿತೇಶ್ ಛದ್ಮವೇಶದಲ್ಲಿ ಪ್ರಥಮ ಮತ್ತು ಯಕ್ಷಗಾನದಲ್ಲಿ ತೃತೀಯ, 10ನೇ ಆಜಾದ್ ತರಗತಿಯ ರಾಮನಾರಾಯಣ ಚರ್ಚಾ ಸ್ಪರ್ಧೆಯಲ್ಲಿ, 8ನೇ ಏಕಲವ್ಯದ ಗಾಯತ್ರಿ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ



ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ಪ್ರಬಂಧ ರಚನೆಯಲ್ಲಿ 10ನೇ ಭಾರ್ಗವದ ಕೃತಿ ತೃತೀಯ ಸ್ಥಾನ, ತುಳು ಭಾಷಣದಲ್ಲಿ 10ನೇ ದುರ್ಗಾವತಿಯ ಪ್ರತೀಷಾ ದ್ವಿತೀಯ ಸ್ಥಾನ, ಸಂಸ್ಕೃತ ಭಾಷಣದಲ್ಲಿ ಜನಪದ ಗೀತೆಯಲ್ಲಿ 9ನೇ ನಿವೇದಿತಾದ ತೇಜಸ್ವಿನಿ ತೃತೀಯ ಸ್ಥಾನ ಪಡೆದು-ಕೊಂಡಿದ್ದಾರೆ. 8ನೇ ಏಕಲವ್ಯದ ಪ್ರಜ್ವಲ್ ರೈ ಮಿಮಿಕ್ರಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾನೆ.

# ಪದವಿಪೂರ್ವ

## ಶಿಕ್ಷಕರ ದಿನಾಚರಣೆ : 5-9-2014

ಶಿಕ್ಷಕ ದಿನಾಚರಣೆಯ ಪ್ರಯುಕ್ತ ಇಂಗ್ಲೀಷ್ ಉಪನ್ಯಾಸಕಿ ಅಕ್ಷತಾ ಮಾತಾಜಿಯವರು ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜೀವನ ಸಾಧನೆಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವುದರ ಮೂಲಕ ನುಡಿನಮನ ಸಲ್ಲಿಸಲಾಯಿತು.

## ಭಿತ್ತಿಪತ್ರಿಕೆಯ ಪ್ರದರ್ಶನ : 8.9.14

ಭಾಮತಿ ವಾಣಿಜ್ಯ ಸಂಘದ ವತಿಯಿಂದ ಕಾಲೇಜಿನಲ್ಲಿ ಭಿತ್ತಿಪತ್ರಿಕೆಯ ಪ್ರದರ್ಶನವನ್ನು ಹಮ್ಮಿಕೊಳ್ಳಲಾಯಿತು. ವಾಣಿಜ್ಯ ವ್ಯವಹಾರಗಳಿಗೆ ಸಹಕಾರಿಯಾಗುವ ವಿವಿಧ ವಿಚಾರಗಳನ್ನು ಉಪನ್ಯಾಸಕರ ನೆರವಿನಿಂದ ಸಿದ್ಧಪಡಿಸಿ, ಪ್ರದರ್ಶಿಸಿದರು.

## ಸಂಸ್ಕೃತ ರಸಪ್ರಶ್ನೆ ಸ್ಪರ್ಧೆ : 13.9.14

ಮಂಗಳೂರು ಶಾರದಾ ವಿದ್ಯಾಲಯದಲ್ಲಿ ನಡೆದ ಜಿಲ್ಲಾ ಮಟ್ಟದ ಸಂಸ್ಕೃತ ರಸಪ್ರಶ್ನೆ ಸ್ಪರ್ಧೆಯಲ್ಲಿ ನವ್ಯಶ್ರೀ - ದ್ವಿತೀಯ ವಿಜ್ಞಾನ ವಿಭಾಗ, ವಾಸವಿ-ಪ್ರಥಮ ವಿಜ್ಞಾನ ವಿಭಾಗ ಪ್ರಥಮ ಸ್ಥಾನ ಗಳಿಸಿದ್ದಾರೆ.

## ತಿಂಗಳ ಭಜನೆ : 23.9.14

ದ್ವಿತೀಯ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ನೆರವೇರಿತು. ಇದೇ ಸಂದರ್ಭದಲ್ಲಿ ಆ ತಿಂಗಳಲ್ಲಿ ಹುಟ್ಟುಹಬ್ಬ ಆಚರಿಸುತ್ತಿರುವ ವಿದ್ಯಾರ್ಥಿಗಳು ಶ್ರದ್ಧಾನಿಧಿಯನ್ನು ಅರ್ಪಿಸಿದರು.

## ಜಿಲ್ಲಾ ಮಟ್ಟದ ವಿಜ್ಞಾನ ಮೇಳ : ವಿವಿಧ ಬಹುಮಾನಗಳು

ದಿನಾಂಕ 11.09.2014ರಂದು ನಡೆದ ದ.ಕ. ಜಿಲ್ಲಾ ಮಟ್ಟದ ಜ್ಞಾನ-ವಿಜ್ಞಾನ ಮೇಳದಲ್ಲಿ ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳ ವಿವರ ಈ ರೀತಿಯಿದೆ. ವೈದಿಕ ಗಣಿತ ರಸಪ್ರಶ್ನೆ ಸ್ಪರ್ಧೆಯಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ಬಿಂದುಶ್ರೀ, ಪೃಥ್ವಿಶೈಲ, ಸ್ವಾತಿ ಪ್ರಥಮ ಸ್ಥಾನ ಗಳಿಸಿದ್ದಾರೆ

ದ್ವಿತೀಯ ವಿಜ್ಞಾನ ವಿಭಾಗದ ಭಾಗ್ಯಶ್ರೀ ಎಮ್. ವಿಜ್ಞಾನ ಪ್ರಯೋಗದಲ್ಲಿ ಪ್ರಥಮ ಸ್ಥಾನ ವನ್ನು ಪಡೆದಿದ್ದಾರೆ. ಸೂರ್ಯಕಲಾ ಎಮ್. ಗಣಿತ ಮಾದರಿಗಳ ಪ್ರದರ್ಶನದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

ವೈದಿಕ ಗಣಿತ ಪತ್ರವಾಚನದಲ್ಲಿ ಕೃಷ್ಣಪ್ರಿಯ ಎನ್. ಭಟ್ ಪ್ರಥಮ ಸ್ಥಾನ, ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ಸತ್ಯಶ್ಯಾಮ, ವಾಸವಿ, ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಮನೋಜ್ ವೈ.ಎಲ್ ಪ್ರಥಮ ಸ್ಥಾನಗಳಿಸಿದ್ದಾರೆ.

ಸ್ವಾತಿ ಕೆ. ಭಟ್ ದ್ವಿತೀಯ ವಿಜ್ಞಾನ ವಿಭಾಗ ವಿಜ್ಞಾನ ಪ್ರಯೋಗದಲ್ಲಿ ದ್ವಿತೀಯ ಸ್ಥಾನ, ಸಾಯಿ ವಿನ್ಯಾ ಶೆಟ್ಟಿ ದ್ವಿತೀಯ ವಿಜ್ಞಾನ ವಿಭಾಗ ವಿಜ್ಞಾನ ಪತ್ರವಾಚನದಲ್ಲಿ ದ್ವಿತೀಯ ಸ್ಥಾನ, ಪಡೆದಿದ್ದಾರೆ. ವೀರೇಶ್ ಕುಮಾರ್ ಕೆ. ಪ್ರಥಮ ವಿಜ್ಞಾನ ವಿಭಾಗ ಧನ್ವಿಷ್ ಕುಮಾರ್ ಹರಿಶ್ ಎಚ್.ಜೆ. , ಸವ್ಯಸಾಚಿ ದ್ವಿತೀಯ ವಿಜ್ಞಾನ ವಿಭಾಗ, ವಿಜ್ಞಾನ ವಸ್ತು ಪ್ರದರ್ಶನದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

## ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗಿ : 20.9.14

ವಿವೇಕಾನಂದ ಪದವಿ ಕಾಲೇಜು ಪುತ್ತೂರು ಇಲ್ಲಿ ನಡೆದ "ಜ್ಯೋತಿಷ್ಯ ಮತ್ತು ಪಂಚಾಂಗ" ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸಕಿಯರಾದ ಮಹಿಮಾ ಮತ್ತು ಶಶಿಕಲಾ ಇವರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## 100% ಫಲಿತಾಂಶಕ್ಕೆ ಅಭಿನಂದನೆ : 27-09-2014

ದ.ಕ. ಜಿಲ್ಲಾ ಪದವಿಪೂರ್ವ ಪ್ರಾಚಾರ್ಯರ ಸಂಘ, ಮಂಗಳೂರು ಇವರು ಮಂಗಳೂರಿನಲ್ಲಿ ನಡೆದ ಪ್ರಾಚಾರ್ಯರ ಸಭೆಯಲ್ಲಿ ಕಳೆದ ಶೈಕ್ಷಣಿಕ ವರ್ಷದಲ್ಲಿ ಜಿಲ್ಲೆಯಲ್ಲಿ ಶೇಕಡಾ 100 ಫಲಿತಾಂಶ ಸಾಧಿಸಿದ ಕಾಲೇಜುಗಳಿಗೆ ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ. ಈ ಪ್ರಶಸ್ತಿಗೆ ಶ್ರೀರಾಮ ಪದವಿಪೂರ್ವ ವಿದ್ಯಾಲಯ ಭಾಜನವಾಗಿದೆ. ದ.ಕ. ಜಿಲ್ಲೆಯಲ್ಲಿ ಒಟ್ಟು 5 ಕಾಲೇಜುಗಳು 100% ಫಲಿತಾಂಶ ಸಾಧಿಸಿದ್ದು ಆ ಪೈಕಿ ಬಂಟ್ವಾಳ ತಾಲೂಕಿನಲ್ಲಿ 2 ಕಾಲೇಜುಗಳಿದ್ದು ಅವುಗಳಲ್ಲಿ ಸದ್ರಿ ವಿದ್ಯಾಸಂಸ್ಥೆಯೂ ಒಂದು.

# ಕ್ರೀಡಾ ವರದಿಗಳು



**ಸೆಪ್ಟೆಂಬರ್ : 11 ರಿಂದ 14** : ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನ್ ದೆಹಲಿ ಇವರು ನಡೆಸಿದ ಉತ್ತರಾಂಚಾಲದ ಹರಿದ್ವಾರದಲ್ಲಿ ನಡೆದ ವಿದ್ಯಾಭಾರತಿ ರಾಷ್ಟ್ರೀಯ ಕಬಡ್ಡಿ ಪಂದ್ಯಾಟದಲ್ಲಿ ಶ್ರೀರಾಮ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಗಳಿಸಿದ್ದಾರೆ.



ಸೆಪ್ಟೆಂಬರ್ 12 ರಂದು ತ್ರಿಶೂರ್‌ನಲ್ಲಿ ನಡೆದ ಕ್ಷೇತ್ರೀಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಶ್ರೀರಾಮ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿದ್ದಾರೆ. ಅಕ್ಟೋಬರ್ 8 ರಿಂದ 10 ರ ತನಕ ದೆಹಲಿಯ ನೋಯ್ಡದಲ್ಲಿ ನಡೆಯುವ ವಿದ್ಯಾಭಾರತಿ ರಾಷ್ಟ್ರೀಯ ಯೋಗಾಸನ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಸೆಪ್ಟೆಂಬರ್ 11ರಂದು ಗುಲ್ಬರ್ಗದಲ್ಲಿ ನಡೆದ ವಿದ್ಯಾಭಾರತಿಯ ಪ್ರಾಂತೀಯ ಕ್ರೀಡಾಕೂಟದಲ್ಲಿ ಅಥ್ಲೆಟಿಕ್ಸ್‌ನಲ್ಲಿ ಸಮಗ್ರ ಪ್ರಶಸ್ತಿ ಪಡೆದು, ಅಕ್ಟೋಬರ್ 9



ರಿಂದ 12ರ ತನಕ ತಮಿಳುನಾಡಿನ ತಿರುವನ್ನೈಲಿಯಲ್ಲಿ ನಡೆಯುವ ವಿದ್ಯಾಭಾರತಿ ಕ್ಷೇತ್ರೀಯ ಕ್ರೀಡಾಕೂಟಕ್ಕೆ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

# ವಿದ್ಯಾರ್ಥಿ ಅಂಕಣ

## ಕಳೆದ ಬಾರಿಯ ಸರಿಯುತ್ತರ

| | | | | |
|---|---|---|---|---|
| 1 ಸೈ | | | | 2 ನ |
| ನಿ | | 3 ಜ | | ವಿ |
| 4 ಕ | ಬ್ಬಿ | ನ | ಹಾ | ಲು |
| | | ಹಿ | | |
| | | ತ | | |
| | | | | |
| 5 ಮ | ರು | ಭೂ | ಮಿ | |
| ಕ | | | | 6 ದಂ |
| ರ | | | | ತ |

## ಕಳೆದ ಬಾರಿಯ ಸರಿಯುತ್ತರ



ಅಬಲೆಯಲ್ಲ ಇವಳು ಸಬಲೆ

**– ದೀಪ್ತಿ 10 ವಿಶ್ವೇಶ್ವರಯ್ಯ**

ಕಷ್ಟದ ದಾರಿಯೆಡೆಗೆ ನಿಷ್ಠೆಯಿಂದ ಸಾಗುವ


**– ವೆನಿಲ್ಲಾ 10 ವಿಶ್ವೇಶ್ವರಯ್ಯ**

## ಚಿತ್ರ ನೋಡಿ ಶೀರ್ಷಿಕೆ ಬರೆಯಿರಿ



**ಮೇಲಿನ ಚಿತ್ರಕ್ಕೆ ಸರಿಹೊಂದುವ ಶೀರ್ಷಿಕೆಯನ್ನು ಬರೆದು ನಿಮ್ಮ ವಿಭಾಗದ ಸರಯೂ ಪೆಟ್ಟಿಗೆಗೆ ಹಾಕಿರಿ. ಉತ್ತಮವಾದ ಬರಹಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಪದಬಂಧ



**ಮೇಲಿಂದ ಕೆಳಕ್ಕೆ**

1. ದೇಶವನ್ನು ಆಳಿದ ವೀರ ಮಹಿಳೆ – (3)
2. ತಂದೆಯಂತೆ ಮಗ – (3)
3. ತಾರೆಗಳ ಗುಂಪು ಅಸಂಖ್ಯವಾದ – (3)
5. ಎಂಥ ಸುಂದರ ಕಟ್ಟಡಗಳಲ್ಲಿ ನಾಗರಿಕರ ವಾಸ – (3)
9. ಪ್ರಕೃತಿಯ ಸೌಂದರ್ಯದ ಅನುಭವ ಇದು (3)
11. ಸಾರ್ಥಕ ಸೇವೆಯ ಸತ್ಯಾರ್ಥ – (3)

**ಎಡದಿಂದ ಬಲಕ್ಕೆ**

1. ವರುಷದ ಈ ಕಾಲ ಸಂತಸ ತಂದಿದೆ – (3)
3. ಭೂಮಿಯಲ್ಲಿ ಅವನಿಗಾಗಿ ಸ್ವಲ್ಪ ಜಾಗ – (3)
4. ಈಕೆಯ ಕಣ್ಣುಗಳು ಮನೋಹರ – (3)
6. ಮಕ್ಕಳಿಗೆ ಯಾವಾಗಲೂ ವಿಭಿನ್ನ ಆಲೋಚನೆ – (4)
7. ಮಳೆಯಿಲ್ಲದ ಈ ಪ್ರದೇಶದಲ್ಲಿ ಬರಡು – (2)
8. ವಿಜ್ಞಾನಿ ಸಾ ಹುಡುಕುತ್ತಾ ಇರುತ್ತಾನೆ – (4)
10. ಇದು ಕಾಡುಗಳ ಬಗ್ಗೆ ಸಂಗ್ರಹ (3)
11. ಈತ ಜೈವಿಕ ಕೃಷಿಕ – (4)

## ಕಾರ್ಯಾಗಾರದಲ್ಲಿ ಭಾಗಿ: 12.09.2014 ರಿಂದ :14.09.2014

ನೆಹರು ಯುವ ಕೇಂದ್ರ ಮಂಗಳೂರು ಮತ್ತು ರಾಷ್ಟ್ರೀಯ ಸೇವಾ ಸಮಿತಿಯ ಜಂಟಿ ಆಶ್ರಯದಲ್ಲಿ ಕಾರ್ಮೆಲ್ ಕಾಲೇಜು ಮೊಡಂಕಾಪುವಿನಲ್ಲಿ ನಡೆದ "ನಾಯಕತ್ವ ಹಾಗೂ ಸಮುದಾಯ ಅಭಿವೃದ್ಧಿ ಶಿಬಿರ"ದಲ್ಲಿ ವಿದ್ಯಾರ್ಥಿಗಳಾದ ರಾಕೇಶ್, ಅಜಯ್ ಶರ್ಮಾ, ಆಕಾಶ್, ಶರತ್ ಕಾರಂತ್, ತೇಜಸ್ವಿನಿ, ಪೂಜಾ, ಆಶಾಲತಾ ಮತ್ತು ಶ್ರೀದೇವಿ ಭಾಗವಹಿಸಿ ಅದರ ಸದುಪಯೋಗವನ್ನು ಪಡೆದುಕೊಂಡರು.

## ಕನ್ನಡ ಸಾಹಿತ್ಯ ಕಲರವ : 12.09.2014

ಪ್ರಮಾಥಿ ಕನ್ನಡ ಸಂಘದ ವತಿಯಿಂದ ಮಕ್ಕಳಿಂದ ರಚಿತವಾದ ಕವನಗಳಿಗೆ ಹಾಡು ಸಂಯೋಜಿಸುವ ವಿನೂತನವಾದ ಕಾರ್ಯಕ್ರಮ ಸಾಹಿತ್ಯ ಕಲರವ ನಡೆಯಿತು. 4 ವಿದ್ಯಾರ್ಥಿಗಳು ಹಾಗೂ 5 ವಿದ್ಯಾರ್ಥಿನಿಯರು ರಚನೆ ಮಾಡಿದ ಕವನಗಳಿಗೆ 8 ವಿದ್ಯಾರ್ಥಿಗಳು ಧ್ವನಿಗೂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲ್ಲಡ್ಕದ ದಂತವೈದ್ಯರಾದ ಪ್ರಶಾಂತ್‌ರವರು ವಹಿಸಿ ವಿದ್ಯಾರ್ಥಿಗಳ ಸಾಹಿತ್ಯಾಭಿರುಚಿಯನ್ನು ಪ್ರಶಂಶಿಸಿ ಈ ರೀತಿಯ ಸೃಜನಾತ್ಮಕತೆ ಭವಿಷ್ಯದ ಹಾದಿಯನ್ನು, ಸಾಹಿತ್ಯ ಕ್ಷೇತ್ರವನ್ನು ಉಜ್ವಲಗೊಳಿಸುತ್ತೆ ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮ ನಿರಂತರವಾಗಲಿ ಎಂದು ಹಾರೈಸಿದರು.

ವೇದಿಕೆಯಲ್ಲಿ ಪ್ರಾಚಾರ್ಯರಾದ ಶ್ರೀ



ಕೃಷ್ಣಪ್ರಸಾದ್, ಕನ್ನಡ ಸಂಘದ ಸಂಯೋಜಕರಾದ ಯತಿರಾಜ್ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಮೋಹಿನಿ, ಹರ್ಷಿತಾ (ದ್ವಿತೀಯ ಬಿಕಾಂ) ರವರು ನಿರೂಪಿಸಿದರು. ಪವಿತ್ರ (ದ್ವಿತಿಯ ಬಿಕಾಂ) ಸ್ವಾಗತಿಸಿ, ಮಧುಶ್ರೀ ವಂದಿಸಿದರು.

## ವಿಚಾರ ಸಂಕಿರಣದಲ್ಲಿ ಭಾಗಿ :

●ದಿನಾಂಕ 04.09.2014 ರಂದು ಶ್ರೀ ವೆಂಕಟರಮಣ ಸ್ವಾಮಿ ಕಾಲೇಜು ಬಂಟ್ವಾಳದಲ್ಲಿ ನಡೆದ ಸಾಮಾಜಿಕ ಸೇವೆ ಮತ್ತು ಯುವಭಾರತ ನಿರ್ಮಾಣದಲ್ಲಿ ವಿವೇಕಾನಂದರ ದೃಷ್ಟಿಕೋನ ಎಂಬ ವಿಚಾರಸಂಕಿರಣದಲ್ಲಿ ನಮ್ಮ ಕಾಲೇಜಿನ ವಸತಿನಿಲಯದ ಮೇಲ್ವಿಚಾರಕರಾಗಿರುವ ರಾಮಚಂದ್ರಪ್ಪ ಅಲ್ಲದೇ ವಿದ್ಯಾರ್ಥಿಗಳಾದ ಕಿಶನ್, ನವೀನ್, ಟೆನಿಸನ್ ಭಾಗವಹಿಸಿರುತ್ತಾರೆ.

●ದಿನಾಂಕ 12.09.2014 ರಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಉಜಿರೆಯಲ್ಲಿ ನಡೆದ ತುಳುನಾಡಿನ ಸ್ಥಳನಾಮಗಳು ಎಂಬ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಕಾಲೇಜಿನ ಇತಿಹಾಸ ಉಪನ್ಯಾಸಕಿ ಶ್ರೀಮತಿ ರೇಖಾ ಭಾಗವಹಿಸಿರುತ್ತಾರೆ.

●ದಿನಾಂಕ 24.09.2014 ರಂದು ವಿವೇಕಾನಂದ ಕಾಲೇಜಿನಲ್ಲಿ ನಡೆದ ಯೌವನ ಜೋಪಾನ ಮಾಹಿತಿ ಕಾರ್ಯಾಗಾರ ಶಿಬಿರದಲ್ಲಿ ಎನ್.ಎಸ್.ಎಸ್. ವಿದ್ಯಾರ್ಥಿಗಳಾದ ರಾಕೇಶ್ ಕುಮಾರ್, ಆಕಾಶ್, ಸಂಚಿತ್ ಭಾಗವಹಿಸಿದ್ದಾರೆ.

## ಇಸ್ರೋಗೆ ಅಭಿನಂದನೆ : 26.09.2014

ಇಸ್ರೋದ ಮಹತ್ವಾಕಾಂಕ್ಷಿ ಯೋಜನೆ ಮಾರ್ಸ್ ಆರ್ಬಿಟರ್ ಮಿಷನ್ ಯಶಸ್ವಿಯಾದ ಹಿನ್ನೆಲೆಯಲ್ಲಿ ಪ್ರಜ್ಞಾನ ಸಾಹಿತ್ಯ ಸಂಘದ ವತಿಯಿಂದ ಗೋಡೆ ಬರಹದ ಮೂಲಕ ಅಭಿನಂದನೆ



ಸಲ್ಲಿಸುವ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳು ಇಸ್ರೋಸಂಸ್ಥೆಗೆ ಹಾಗೂ ವಿಜ್ಞಾನಿಗಳಿಗೆ ಈ ಉತ್ತಮ ಸಂದೇಶಗಳ ಮೂಲಕ ಶುಭಾಶಯ ಕೋರಿದರು.

## ಹಿಂದಿ ದಿನಾಚರಣೆ : 26.09.2014

ಎನ್.ಎಸ್.ಎಸ್ ಘಟಕ ಹಾಗೂ ನೆಹರೂ ಯುವ ಕೇಂದ್ರ ಮಂಗಳೂರು ಇದರ ಆಶ್ರಯದಲ್ಲಿ ಹಿಂದಿ ದಿನಾಚರಣೆ ಕಾರ್ಯಕ್ರಮವು ಅಜಿತಕುಮಾರ ಸಭಾಭವನದಲ್ಲಿ ನಡೆಯಿತು.



ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಕಾಶ್ ಶೆಣೈ ಮಾತನಾಡಿ ಹಿಂದಿ ರಾಷ್ಟ್ರವನ್ನು ಒಗ್ಗೂಡಿಸಿದ ಭಾಷೆ, ಸುಮಾರು 4,60,000ಕ್ಕೂ ಮಿಕ್ಕಿ ಶಬ್ದಗಳು ಹಿಂದಿಯಲ್ಲಿವೆ. ಪ್ರತಿಯೊಂದು ವಸ್ತುವಿಗೂ ಹೊಸ ಹೊಸ ಶಬ್ದಗಳನ್ನು ಭಾರತೀಯ ಭಾಷೆಯಲ್ಲಿ ಹೇಳಲು ಸಾಧ್ಯ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯತ್ ಸದಸ್ಯ ಚೆನ್ನಪ್ಪ ಕೋಟ್ಯಾನ್ ವಹಿಸಿದರು. ವೇದಿಕೆಯಲ್ಲಿ ಸಂಸ್ಥೆಯ ಸಂಚಾಲಕ ಡಾ.ಪ್ರಭಾಕರ್ ಭಟ್ ಕಲ್ಲಡ್ಕ, ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ ಕಾಯರ್‌ಕಟ್ಟೆ ಉಪಸ್ಥಿತರಿದ್ದರು. ಕೀರ್ತಿರಾಜ್ ಸ್ವಾಗತಿಸಿ, ಮೋಹನ್ ವಂದಿಸಿ, ವೆಂಕಟೇಶ್ ಕಾರ್ಯಕ್ರಮ ನಿರ್ವಹಿಸಿದರು.

## ಪತ್ರಿಕಾ ವರದಿಗಾರರ ಭೇಟಿ : 22.09.2014



ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯ ಕರ್ನಾಟಕದ ಪತ್ರಿಕೆಯ ವರದಿಗಾರರಾದ ಅಶ್ವುತ್ ಸುದಿಪ್ತೋ ಹಾಗೂ ಅನಿಶಾ ಸೇನ್ ಅವರು ಭೇಟಿ ನೀಡಿ ಸಂಸ್ಥೆಯ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಪೂರ್ವಾಂಚಲದ ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದರು.

## ಗಣ್ಯರ ಭೇಟಿ 26.09.2014


ಭಾರತ ಸಮರ್ಥಗೊಳ್ಳಲು ಇಲ್ಲಿನ ಪ್ರಜೆಗಳು ಸಮರ್ಥರಾಗಬೇಕು. ಅದಕ್ಕಾಗಿ



ಗಳಿಸಿಕೊಳ್ಳಬೇಕಾದ ಸಾಮರ್ಥ್ಯವು ಜನನ ಪೂರ್ವದಿಂದಲೇ ಆರಂಭವಾಗುವುದು. ಅದಕ್ಕಾಗಿ ಸ್ತ್ರೀ-ಪುರುಷರು ತಮ್ಮ ಜೀವನದಲ್ಲಿ ಬ್ರಹ್ಮಚರ್ಯದ ಪಾಲನೆ ಮಾಡಲೇಬೇಕು. ವಿದ್ಯಾರ್ಥಿ ದೆಸೆಯಲ್ಲೇ ಈ ಬಗ್ಗೆ ಜಾಗೃತಿ ಮೂಡಿಸಿಕೊಳ್ಳಬೇಕು ಎಂದು ಗುಜರಾತ್ ಪುನರುತ್ಥಾನ ವಿದ್ಯಾಪೀಠ ಸಂಸ್ಥೆಯ ಸಹಸಂಯೋಜಕ ದಿಲೀಪ್ ಕೇಳ್ಕರ್ ಹೇಳಿದರು. ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ವೇದಿಕೆಯಲ್ಲಿ ಕಾಲೇಜಿನ ಸಂಚಾಲಕರಾದ ಡಾ ಪ್ರಭಾಕರ್ ಭಟ್, ಪ್ರಾಚಾರ್ಯರಾದ ಶ್ರೀಕೃಷ್ಣಪ್ರಸಾದ್ ಅವರು ಉಪಸ್ಥಿತರಿದ್ದರು. ಮೈತ್ರೇಯಿ ಗುರುಕುಲದ ವ್ಯವಸ್ಥಾಪಕ ಶ್ರೀ ಶ್ಯಾಮ್ ಉಪಸ್ಥಿತರಿದ್ದರು.

# 14ನೇ ವರ್ಷದ ನವದಂಪತಿಗಳ ಸಮಾವೇಶ 14-09-2014

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ಶ್ರೀರಾಮ ಶಿಶುಮಂದಿರದ ವತಿಯಿಂದ ವೇದವ್ಯಾಸ ಧ್ಯಾನ ಮಂದಿರದಲ್ಲಿ ಇತ್ತೀಚಿಗೆ ದಾಂಪತ್ಯ ಜೀವನಕ್ಕೆ ಕಾಲಿರಿಸಿದವರಿಗೆ ನವದಂಪತಿಗಳ ಸಮಾವೇಶ ಏರ್ಪಡಿಸಲಾಗಿತ್ತು.



ಮಾರ್ಗದರ್ಶಕರಾಗಿ ಶ್ರೀ ಸು.ರಾಮಣ್ಣ, ಡಾ। ಪ್ರಭಾಕರ ಭಟ್ ಮತ್ತು ಹಿರಿಯ ದಂಪತಿಗಳಾಗಿ ಶ್ರೀ ರಘು ಸಪಲ್ಯ ಮತ್ತು ಶ್ರೀಮತಿ ಲಕ್ಷ್ಮೀ ಆಗಮಿಸಿದ್ದರು. ಶ್ರೀಯುತ ನಾರಾಯಣ ಸೋಮಯಾಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ದಿನಪೂರ್ತಿ ನಡೆದ ಈ ಕಾರ್ಯಕ್ರಮದಲ್ಲಿ ನವದಂಪತಿಗಳನ್ನು ಕಾಲು ತೊಳೆದು ಅರಶಿನ ಕುಂಕುಮವಿಟ್ಟು ದೀಪ ಬೆಳಗಿ ಹಿರಿಯರಿಂದ ಆಶೀರ್ವಾದಪೂರ್ವಕ ತಿಲಕಧಾರಣೆಯೊಂದಿಗೆ ಸ್ವಾಗತಿಸಲಾಯಿತು. ಶ್ರೀ ಡಾ। ಪ್ರಭಾಕರ ಭಟ್ ಇವರು ಈ ಕಾರ್ಯಕ್ರಮ ಮಾಡುವ ಚಿಂತನೆ, ಉದ್ದೇಶ, ಸಮಾಜದಲ್ಲಿ ಉತ್ತಮ ವ್ಯಕ್ತಿ ನಿರ್ಮಾಣ, ಉತ್ತಮ ಕುಟುಂಬದ ನಿರ್ಮಾಣ ಅಗತ್ಯದ ಕುರಿತಾಗಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.




ಹಿಂದು ಮನೆಯ ಶ್ರೇಷ್ಠತೆ, ಮನೆಯ ಹಿರಿಯರ ಬಗೆಗೆ ನಮಗಿರಬೇಕಾದ ಗೌರವ, ಇತರರೊಂದಿಗೆ ನಡೆದುಕೊಳ್ಳಬೇಕಾದ ರೀತಿ-ನೀತಿ, ಹಬ್ಬಗಳ ಆಚರಣೆ ಹೀಗೆ ಕಾರ್ಯಕ್ರಮ ಪೂರ್ತಿ ಮುಂದಿನ ಜೀವನವನ್ನು ನವದಂಪತಿಗಳು ರೂಪಿಸಿಕೊಳ್ಳಬೇಕಾದ ಬಗೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕ, ಕುಟುಂಬ ಪ್ರಭೋದನ್ ಇದರ ಅಖಿಲ ಭಾರತ ಪ್ರಮುಖರು ಶ್ರೀ ಸು. ರಾಮಣ್ಣ ಮಾರ್ಗದರ್ಶನ ಮಾಡಿದರು.




ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿ ಗುಂಪು ಚರ್ಚೆಗಳು ನಡೆದವು. ಪುರುಷರ ಗುಂಪಿನಲ್ಲಿ ಶ್ರೀಯುತ ಡಾ। ಪ್ರಭಾಕರ ಭಟ್, ಶ್ರೀಯುತ ರಘು ಸಪಲ್ಯ ಉಪಸ್ಥಿತರಿದ್ದರು. ಮನೆಯಲ್ಲಿ ಬರುವ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ ಅದಕ್ಕೆ ಬೇಕಾದ ರೀತಿಯಲ್ಲಿ ಸಲಹೆ ಮಾರ್ಗದರ್ಶನ ನೀಡಿದರು.



ಮಹಿಳೆಯರ ಗುಂಪಿನಲ್ಲಿ ಶ್ರೀಮತಿ ಡಾ। ಕಮಲಾ ಭಟ್ ಶ್ರೀಮತಿ ಲಕ್ಷ್ಮೀ ಉಪಸ್ಥಿತರಿದ್ದರು. ಬೇರೆ ಮನೆಗೆ ಬೇರೆ ಸಂಪ್ರದಾಯಕ್ಕೆ ಬರುವಾಗ ಆಗುವ ಸಮಸ್ಯೆ, ಅದಕ್ಕೆ ಪರಿಹಾರ, ಎರಡು ಮನೆಯ ಮತ್ತು ಮನದ ಗೌರವ ರಕ್ಷಣೆ... ಮುಂತಾದ ಹಲವು ವಿಷಯಗಳ ಬಗೆಗೆ ಮಾರ್ಗದರ್ಶನ ನೀಡಿದರು.






ಭೋಜನದ ನಂತರ ಎರಡು ಗುಂಪುಗಳಲ್ಲಿ ನಡೆದ ಚರ್ಚೆಯ ವಿವರಗಳನ್ನು ನೀಡಲಾಯಿತು. ಶ್ರೀ ಪ್ರಸಾದ್ ಬಿ.ಸಿ.ರೋಡ್ ಇವರು ಪುರುಷರ ವಿಭಾಗದ ಮತ್ತು ಶ್ರೀಮತಿ ಶುಭಲಕ್ಷ್ಮೀ ಶಿವಗಿರಿ ಮಹಿಳೆಯರ ವಿಭಾಗದ ಕ್ರೋಢೀಕೃತ ವರದಿಗಳನ್ನು ಮಂಡಿಸಿದರು.



ಹಿರಿಯ ದಂಪತಿಗಳಾದ ಶ್ರೀ ರಘು ಸಪಲ್ಯ ಇವರು ಜೀವನದಲ್ಲಿ ಸಾಮರಸ್ಯದಿಂದ ಬದುಕಿ ಬಾಳಿದ ಬಗ್ಗೆ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳುತ್ತಿದ್ದ ರೀತಿ ಹೀಗೆ ಅನುಭವವನ್ನು ಹಂಚಿಕೊಂಡರು.

ಭಾಗವಹಿಸಿದ ದಂಪತಿಗಳು ಕಾರ್ಯಕ್ರಮದ ವ್ಯವಸ್ಥೆ ಅಚ್ಚುಕಟ್ಟುತನವನ್ನು ಮೆಚ್ಚಿ ಅನುಭವ ಹಂಚಿಕೊಂಡರು. ಶ್ರೀ ಸು.ರಾಮಣ್ಣ ಇವರು ಸಮಾರೋಪ ಭಾಷಣದಲ್ಲಿ ದಂಪತಿಗಳಿಗೆ ಕುಟುಂಬದ ಸೂಕ್ಷ್ಮತೆಯನ್ನು ವಿವರಿಸಿದರು.



ನವದಂಪತಿಗಳಿಗೆ ಅರಶಿನ ಕುಂಕುಮ ಮತ್ತು ಸ್ಮರಣಿಕೆಯನ್ನು ನೀಡಿ ಹಿರಿಯರು ಆಶೀರ್ವದಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 141 ಜೋಡಿ ದಂಪತಿಗಳು ಭಾಗವಹಿಸಿದ್ದರು.

ಶ್ರೀಮತಿ ಸಂಗೀತಾ ಸ್ವಾಗತಿಸಿ, ಶ್ರೀಮತಿ ಭಾರತಿ ವಂದಿಸಿ, ಶ್ರೀಮತಿ ಮಮತಾ ನಿರೂಪಿಸಿದರು.

SRI RAMA VIDYAKENDRA TRUST (R.)
HANUMAN NAGAR, KALLADKA
BANTWAL TQ., DAKSHINA KANNADA, KARNATAKA 574 222
Ph.: 08255-275273 / 275183 / 275073 / 275693 / 279673 / 200085 / 279479
Website : **www.srvk.org** E-mail : **info@srvk.org**

BOOK POST

**ಸವಿಧೇ,**

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Kalladka, Bantwal Tq, D.K. and printed at Anagha Digital Square, Kaikamba, B.C. Road.